ಸುರತ್ಕಲ್ ಕ್ಷೇತ್ರದ ಪೆರ್ಮುದೆ ಪಂಚಾಯತ್ ಕಾರ್ಯಾಲಯದ ಬಗ್ಗೆ

414 (353) ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಸುರತ್ಕಲ್ ಕ್ಷೇತ್ರದ ಪೆರ್ಮುದೆ ಪಂಚಾಯತ್‌ನ ಕಾರ್ಯಾಲಯ ಗ್ರಾಮದ ಕೊನೆಯಲ್ಲಿದ್ದು ಸಾರ್ವಜನಿಕರು ತೊಂದರೆಗೊಳಗಾಗುತ್ತಿರುವುದು ನಿಜವೆ?

2) ಸದರಿ ಪಂಚಾಯತ್ ಆಫೀಸನ್ನು ಸ್ಥಳಾಂತರಿಸಿ ಕುತ್ತೆತ್ತೂರು ಪ್ರದೇಶಕ್ಕೆ ಸ್ಥಳಾಂತರಿಸುವ ಬೇಡಿಕೆ ಸರಕಾರದ ಪರಿಶೀಲನೆಯಲ್ಲಿದೆಯೇ?

3) ಪಕ್ಕದ ಬಾಳ ಪಂಚಾಯತಿನ ಹೆಚ್ಚಿನ ಭಾಗ ಎಂ. ಆರ್. ಪಿ. ಎಲ್. ಗೆ ಹೋಗಿರುವುದರಿಂದ ಪೆರ್ಮುದ್ ಪಂಚಾಯತ್‌ನ್ನು ವಿಭಜಿಸಿ ಬಾಳಕ್ಕೆ ಸೇರಿಸುವ ಪ್ರಸ್ತಾವ ಸರಕಾರದ ಮುಂದೆ ಇದೆಯೇ?

4) ಹಾಗಿದ್ದಲ್ಲಿ ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು) :

1) ಹೌದು

2) ಇಲ್ಲ

3) ಹೌದು

4) ಜಿಲ್ಲಾಧಿಕಾರಿ, ಮಂಗಳೂರು ರವರು ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ 1993 ರಡಿಯಲ್ಲಿ ಕ್ರಮ ಕೈಗೊಳ್ಳುತ್ತಿದ್ದಾರೆ.

ರಾಜ್ಯದಲ್ಲಿರುವ ಆಯುರ್ವೇದ ಆಸ್ಪತ್ರೆಗಳ ಕುರಿತು

415 (354) ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ರಾಜ್ಯದಲ್ಲಿ 1996 ರಿಂದ ಇದುವರೆವಿಗೂ ಎಷ್ಟು ಆಯುರ್ವೇದ ಆಸ್ಪತ್ರೆಗಳನ್ನು ಸ್ಥಾಪಿಸಲಾಗಿದೆ? ರಾಜ್ಯದ ಎಲ್ಲಾ ಆಸ್ಪತ್ರೆಗಳಲ್ಲಿ ವೈದ್ಯರು ಇದ್ದಾರೆಯೇ? ಸ್ವಂತ ಕಟ್ಟಡಗಳು ಇರುವ ಆಸ್ಪತ್ರೆಗಳ ಸಂಖ್ಯೆ ಎಷ್ಟು?

2) ಆಯುರ್ವೇದ ವೈದ್ಯ ಪದ್ಧತಿಯ ಪ್ರಚಾರಕ್ಕಾಗಿ ಸರ್ಕಾರ ಹಾಕಿಕೊಂಡಿರುವ ಯೋಜನೆಗಳು ಯಾವುವು?

3) ಶಾಸಕರ ಭವನದ ಆಯುರ್ವೇದ ಆಸ್ಪತ್ರೆಯ ಉಪಯೋಗಕ್ಕೆ ಔಷಧ ವಿತರಣೆಯ ವಾರ್ಷಿಕ ಮೊತ್ತವೆಷ್ಟು?

4) ಈ ಮೊತ್ತದಿಂದ ಸಾಕಷ್ಟು ಔಷಧ ಸಂಗ್ರಹ ಇಲ್ಲದೆ ಶಾಸಕರು ತೊಂದರೆ ಇದಾಗುತ್ತಿರುವುದು ನಿಜವೇ? ಈ ಬಗ್ಗೆ ಪರಿಹಾರ ಕ್ರಮ ಕೈಗೊಳ್ಳಲಾಗುವುದೆ?